# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಹಾಗೂ ವಿಶೇಷ ನ್ಯಾಯಾಧೀಶರು (ಎನ್ ಡಿ ಪಿ ಎಸ್), ದಾವಣಗೆರೆ.

**ವಿಶೇಷ ಪ್ರಕರಣ (ಎನ್‌ಡಿಪಿಎಸ್) ಸಂಖ್ಯೆ: 8/2021**

**ಫಿರ್ಯಾದುದಾರರು:** ಕರ್ನಾಟಕ ಸರ್ಕಾರದ ಪರವಾಗಿ,
ದಾವಣಗೆರೆ ಸಿ.ಇ.ಎನ್, ಕ್ರೈಂ ಪೋಲೀಸ್ ಠಾಣೆ ದಾವಣಗೆರೆ.

**-ವಿರುದ್ಧ-**

**ಆರೋಪಿ:-** ಮಧುರಾಜ @ ಮಧುನಾಯ್ಕ ತಂದೆ ನರಸಿಂಗ್ ನಾಯ್ಕ.

. . . . .

**-ದೋಷಾರೋಪಣೆ-**

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್‌ಎಲ್.ಎಂ., ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು(ಎನ್‌ಡಿಪಿಎಸ್), ದಾವಣಗೆರೆ ಆದ ನಾನು, ಈ ಕೆಳಕಂಡ ಆರೋಪಿತನಾದ:-

ಮಧುರಾಜ @ ಮಧುನಾಯ್ಕ ತಂದೆ ನರಸಿಂಗ್ ನಾಯ್ಕ, ವಯಸ್ಸು: 40 ವರ್ಷ, ಉದ್ಯೋಗ: ಹಣ್ಣಿನ ವ್ಯಾಪಾರಿ, ವಾಸ: ಪಾಂಡು ರಂಗ ದೇವಸ್ಥಾನದ ಹತ್ತಿರ ಬಂಡೆಬಸಾಪುರ ತಾಂಡ ಗ್ರಾಮ ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಹಾಲಿ ವಾಸ: #267, ಕಾಲ್ಕೊಂಡ, ಮರ್ ಗಾವ್ ತಾಲ್ಲೂಕು ಮತ್ತು ಜಿಲ್ಲೆ, ದಕ್ಷಿಣ ಗೋವಾ, ಗೋವಾ ರಾಜ್ಯ.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆ:-

ದಿನಾಂಕ 03.04.2021 ರಂದು ಬೆಳಿಗ್ಗೆ 10.00 ಗಂಟೆಯಿಂದ ಬೆಳಿಗ್ಗೆ 11.40 ಗಂಟೆಯ ಮಧ್ಯದ ಅವಧಿಯಲ್ಲಿ ಆರೋಪಿತನಾದ ನೀನು ಇತರೆ ಆರೋಪಿತರೊಂದಿಗೆ ಸೇರಿ ಬಾಡಾ ಕ್ರಾಸ್ ಹತ್ತಿರ ಇರುವ ಪದ್ಮ ಶ್ರೀ ಚಿಂದೋಡಿ ಲೀಲಾ ರಂಗಲೋಕದ ಹಿಂಭಾಗದ ಎನ್.ಹೆಚ್.48 ಸರ್ವೀಸ್ ರಸ್ತೆಯ ಪಕ್ಕದ ಮಣ್ಣಿನ ಸಾರ್ವಜನಿಕ ರಸ್ತೆಯಲ್ಲಿ ಅಕ್ರಮವಾಗಿ ಸಾರ್ವಜನಿಕರಿಗೆ ಗಾಂಜಾವನ್ನು ಮಾರಾಟ ಮಾಡುವ ಉದ್ದೇಶದಿಂದ (ಹೂ, ಮೊಗ್ಗು, ಬೀಜದಿಂದ ಕೂಡಿದ) ಪ್ಲಾಸ್ಟಿಕ್ ಕವರ್ ನಲ್ಲಿ ಇಟ್ಟುಕೊಂಡು ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದು, ಸುಮಾರು ರೂ.2,10,100/- ಬೆಲೆಬಾಳುವ 8 ಕೆ.ಜಿ. 600 ಗ್ರಾಂ ಗಾಂಜಾ ಮತ್ತು ರೂ.900/- ನಗದು ಹಣ, 25 ಸಣ್ಣ ಪಾಲೀಥಿನ್ ಕವರ್ ಇಟ್ಟುಕೊಂಡಿದ್ದು, ಆರೋಪಿತನಾದ ನೀನು ನಿನ್ನ ಲಾಭಕ್ಕಾಗಿ ಅಕ್ರಮವಾಗಿ ಗಾಂಜಾವನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ

ಉದ್ದೇಶದಿಂದ ಗಾಂಜಾವನ್ನು ಅಕ್ರಮವಾಗಿ ಸಂಗ್ರಹಿಸಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಈ ಮೂಲಕ ಎನ್.ಡಿ.ಪಿ.ಎಸ್. ಕಾಯ್ದೆ ಕಲಂ 20(b)(ii)(B) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಆರೋಪಿತನಾದ ನೀನು ಮೇಲೆ ಹೇಳಿದ ಆರೋಪಗಳಿಗೆ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 30 ನೇ ದಿವಸ ಮೇ ಮಾಹೆಯ 2024 ನೇ ಇಸವಿಯಂದು.

RAJESHWARI N HEGDE Digitally signed by RAJESHWARI N HEGDE Date: 2024.06.10 17:17:25 +0530

**(ರಾಜೇಶ್ವರಿ ಎನ್. ಹೆಗಡೆ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ಆರೋಪಿಃ ಮಧುರಾಜ @ ಮಧುನಾಯ್ಕ ತಂದೆ ನರಸಿಂಗ್ ನಾಯ್ಕ.

**ಆರೋಪಿಯ ಆಪಾದನೆ**

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ:

(ದಿನಾಂಕ 30 ನೇ ದಿವಸ ಮೇ ಮಾಹೆಯ 2024 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

(ರಾಜೇಶ್ವರಿ ಎನ್. ಹೆಗಡೆ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.